ಮಾಡಿದಂಥ ಅಧಿಕಾರಿ ಯಾರಾದರೂ ಇದ್ದರೆ, ಹಾಗಾದರೆ, ನೀನು ಒಂದನೇ ದರ್ಜೆಯ ಗುಮಾಸ್ತನಾಗಿ ಹೋಗಪ್ಪ, ನಿನಗೆ ಬೇರೆ ವಿವೇಕಯುತವಾಗಿ, ವಿವೇಚನೆ ಉಪಯೋಗಿಸಿಕೊಳ್ಳುವ ಶಕ್ತಿ ನಿನಗೆ ಇರಬೇಕು, ತತ್‌ಕ್ಷಣದಲ್ಲಿ ರಸ್ತೆ ರಿಪೇರಿ ಮಾಡುವುದಕ್ಕೆ ದುಡ್ಡು ಕೊಡಬೇಕಾಗುತ್ತದೆ. ಇಂಜಿನಿಯರ್ ಬರಲಿಲ್ಲವೆಂದರೆ, ನಿಮ್ಮ ಸ್ಥಳೀಯ ಶಾಸಕರುಗಳನ್ನು ಅಥವಾ ಜನ ಪ್ರತಿನಿಧಿಗಳನ್ನು ಇಟ್ಟುಕೊಂಡು ಆ ಕೆಲಸ ಮಾಡಬೇಕಾಗುತ್ತದೆ. ಮೊದಲು ಮಾಡಬೇಕಾಗಿರುವುದು ಆದ್ಯತೆಯ ನಿಯಮಾವಳಿ ಪ್ರಕಾರ disaster management ವಿಚಾರಕ್ಕೆ ಸಂಬಂಧಿಸಿದಂತೆ ಅವರಿಗೆ ಬಹಳಷ್ಟು ತರಬೇತಿಯನ್ನೂ ಕೊಟ್ಟಿದ್ದೇವೆ. ಅಂತಹುದ್ದೇನಾದರೂ ಇದ್ದಲ್ಲಿ, ನಿಮ್ಮ ಜಿಲ್ಲಾಧಿಕಾರಿಗಳಿಗೆ ಆ ಸೂಚನೆಯನ್ನು ಈ ದಿವಸವೇ ಕಳುಹಿಸಿಕೊಡುತ್ತೇವೆ.

(3) ವಿಷಯ: ಬಂದೀಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಬಿ.ಎಸ್.ಅಬ್ಬಾಯಿಯವರ ಆತ್ಮಹತ್ಯೆ ಕುರಿತು.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗ ಸದನದಲ್ಲಿ ಗೃಹ ಸಚಿವರಿದ್ದಾರೆ. ಬಂದೀಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಬಿ.ಎಸ್.ಅಬ್ಬಾಯಿಯವರು ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ರಿಕೆಯಲ್ಲಿ ಬಂದಿದೆ. ಅವರ ಸ್ವಂತ ಊರಾದ ಬೆಳಗಾಂನಲ್ಲಿ ಮೃತರ ಅಂತ್ಯಕ್ರಿಯೆ ಜರುಗಿದೆ. ಅವರು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಒಂದು ಪತ್ರವನ್ನು ಬರೆದಿದ್ದಾರೆ. ಅವರ ಮನೆಯವರು ಹೇಳಿರುವ ಪ್ರಕಾರ, ನಾವು ಎಂ.ಪಿ.ಪ್ರಕಾಶ್‌ರವರಿಗೂ ಇದರ ಬಗ್ಗೆ ಹೇಳಿದ್ದೇವೆಂದು ಹೇಳಿದ್ದಾರೆ. ನಾನು ಕೂಡ ಗೃಹ ಸಚಿವನಾಗಿ ಕೆಲಸ ಮಾಡಿದ್ದೇನೆ. ಅವರು ಬಂದೀಖಾನೆಯಲ್ಲಿದ್ದರು. ನಾನು ಮುಖ್ಯಮಂತ್ರಿಯಾಗಿದ್ದಾಗಲೂ 26ನೇ ಜನವರಿಗೆ ಮತ್ತು 15ನೇ ಆಗಸ್ಟ್‌ಗೆ ಬಂದೀಖಾನೆಗೆ ಹೋಗಿ ಕೈದಿಗಳನ್ನು ಭೇಟಿಯಾಗುವ ಸಂದರ್ಭದಲ್ಲಿ ಅವರನ್ನು ನೋಡಿದ್ದೇನೆ. ನಾನು ಇಲ್ಲಿ ನಿಂತಿದ್ದು ಏಕೆಂದರೆ, ಪ್ರಕಾಶ್‌ರವರೆ, ನೀವು ಅದನ್ನು ಕೇಳುವುದೇ ಬೇಕಿಲ್ಲ. ನೀವೇ ಹೇಳಬಹುದು. ಇವತ್ತು ಈ ತರಹದ ಒಬ್ಬ ಡಿ.ಐ.ಜಿ. ಬಂದೀಖಾನೆಯಲ್ಲಿ ಸುಮಾರು 26–27 ವರ್ಷಗಳಷ್ಟು ಕಾಲ ಕೆಲಸ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಪತ್ರ ಬರೆದಿದ್ದಾರೆ. ಇದಕ್ಕೂ ಮುನ್ನ ಗೃಹ

ಸಚಿವರನ್ನು ಕಂಡು representation ಕೂಡ ಕೊಟ್ಟಿದ್ದಾರೆ. ಅವರ ಮಗ ಪಾಪ! 13 ವರ್ಷ ವಯಸ್ಸಿನ ಹುಡುಗ. ಮೃತರ ಮನೆಯವರ ಗೋಳನ್ನು ನೋಡುವುದಕ್ಕಾಗುವುದಿಲ್ಲ. ಏಕೆಂದರೆ, ಇಂತಹ ಒಂದು ಅನಾಹುತ ಮತ್ತು ಅದರಲ್ಲೂ ವಿಶೇಷವಾಗಿ ಪ್ರಕಾಶ್‌ರವರು ಆ ಇಲಾಖೆಯ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾರೆ. ಇದು ಏಕಾಯಿತು? ಇದೆಲ್ಲವೂ ಸಾರ್ವಜನಿಕರ ಮನಸ್ಸಿನಲ್ಲಿದೆ. ಇವತ್ತಿನ ದಿವಸ ಗೃಹ ಸಚಿವರಾದ ತಾವು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ಮಾನ್ಯ ಅಬ್ಬಾಯಿಯವರಾಗಿದ್ದರು. ಸುಮಾರು 25–30 ವರ್ಷಗಳಿಂದಲೂ ಅವರು ನನಗೆ ಪರಿಚಿತರು. ಅವರು ನಮ್ಮ ಬೈಲಹೊಂಗಲದ ಕಡೆಯವರು. ಅವರು ಬಹಳ ಸೂಕ್ಷ್ಮ ವ್ಯಕ್ತಿ ಇರಬಹುದೆಂದು ನಾನು ಭಾವಿಸಿದ್ದೇನೆ. ಏಕೆಂದರೆ, ಈ ವಿಚಾರದಲ್ಲಿ ನಿಮಗೆ ಫೋನ್ ಕರೆ ಬಂದಿದೆಯೋ, ಇಲ್ಲವೋ, ಗೊತ್ತಿಲ್ಲ. ಅಲ್ಲಿ ಒಬ್ಬ ಒಳ್ಳೆಯ ಕೈದಿ ಇದ್ದ! ಆತ ಚಾರ್ಲ್ಸ್ ಶೋಭರಾಜ್‌ರನ್ನೂ ಮೀರಿಸುವಂತಹ ಒಬ್ಬ ಕೈದಿ. ಆತ ಅನೇಕ ಭಾಷೆಗಳಲ್ಲಿ ಬಹಳ ಚೆನ್ನಾಗಿ ಮಾತನಾಡತಕ್ಕಂಥವನಾಗಿದ್ದ. ಪ್ರಾಯಶಃ, ಆ ಒಬ್ಬ ವ್ಯಕ್ತಿ ಮಾಡಿದರೋ ಅಥವಾ ಯಾರು ಮಾಡಿದರೋ, ಗೊತ್ತಿಲ್ಲ. ದೂರವಾಣಿ, ಮೊಬೈಲ್ ಮೂಲಕವಾಗಿ ಇಲ್ಲಿ ಮಾತನಾಡುತ್ತಾರೆ, ಸಂಭಾಷಣೆಯಾಗುತ್ತಿದೆ, ಇಂತಹುದೇ ಬ್ಯಾರಕ್ ಎಂದು ಒಂದು ವರದಿ ಬಂದಿದ್ದರಿಂದ ರಾತ್ರಿ ಹೊತ್ತಿನಲ್ಲಿ ಎಡಿಜಿಪಿಯವರು ಅನಿರೀಕ್ಷಿತ ಭೇಟಿ ನೀಡುತ್ತಾರೆ. ಆ ಸಂದರ್ಭದಲ್ಲಿ ಆ ಮೊಬೈಲ್ ಒಬ್ಬ ಕೈದಿ ಹತ್ತಿರ ಇದ್ದುದನ್ನು ಕೂಡ ಅವರು ಕಂಡುಕೊಳ್ಳುತ್ತಾರೆ. ನಂತರ, ಅದನ್ನು ಅವರು ಪಂಚನಾಮೆ ಮೂಲಕ ತಮ್ಮ ಸ್ವಾಧೀನಕ್ಕೆ ತಂದುಕೊಳ್ಳುತ್ತಾರೆ. ಅದೇ ರೀತಿ ಮತ್ತೊಬ್ಬ ಬೆಂಗಳೂರಿನ ಒಬ್ಬ ಕೈದಿ, ರೌಡಿ elements ಆಗಿರುವ ಕೆಲವರು ಅವರ ಕೋಣೆಯಲ್ಲಿ, ಅಲ್ಲಿ ಒಂದು ಗೋಣಿಚೀಲದ ಕೆಳಗೆ ಮಣ್ಣಿನ ಸಣ್ಣ ಒಲೆ ಮಾಡಿ, ಅಲ್ಲೊಂದು electric coil ಮೂಲಕವಾಗಿ ಪ್ರಾಯಶಃ ಅವರು ಅಡುಗೆ ಮಾಡಿಕೊಳ್ಳುತ್ತಿದ್ದರು ಎನ್ನುವುದು ಅನಿರೀಕ್ಷಿತ ಪರೀಕ್ಷೆಯಿಂದ ವ್ಯಕ್ತವಾಗಿದೆ. ಆಗ ಆ ಸಂದರ್ಭದಲ್ಲಿ ಅವರನ್ನು ಕೇಳಿದಾಗ, 'ಇಲ್ಲ, ನಾವು ನೀರನ್ನು ಬಿಸಿ ಮಾಡಿಕೊಳ್ಳುವುದಕ್ಕೆ ಇಟ್ಟುಕೊಂಡಿದ್ದೇವೆ' ಎಂತಲೂ

ಹೇಳಿದ್ದಾರೆ. ಅದಾದ ನಂತರ, ಅಡುಗೆ ಮನೆಯ ಉಗ್ರಾಣದ ಕೋಣೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ಚಿಕ್ಕ ಚಿಕ್ಕ ಪ್ಯಾಕೇಟುಗಳಲ್ಲಿ ಚಹಾ ಪುಡಿ ಮತ್ತು ಬೇರೆ ಬೇರೆ ದಿನಸಿಗಳನ್ನು ಪ್ಯಾಕ್ ಮಾಡಿ ಸಿದ್ಧಪಡಿಸಿಟ್ಟಿರುವುದನ್ನು ಅವರು ಕಾಣುತ್ತಾರೆ. ಇದನ್ನು ಕಂಡಾಗ ಪ್ರಾಯಶಃ, ಇದಕ್ಕೆ ಸಂಬಂಧಪಟ್ಟವರು ಯಾರು ಎಂದು ವಿಚಾರಿಸಿದಾಗ ಅಬ್ಬಾಯಿ ಮೊದಲಾದ ಎಲ್ಲರನ್ನು ಕೂಡ ಅವರು ಕರೆಸುತ್ತಾರೆ. ಇದು ಅನಿರೀಕ್ಷಿತವಾದಂಥಾದ್ದು, ಅದರ ಬಗ್ಗೆ ಈಗ ವರದಿಯನ್ನು ತಯಾರಿಸಿ ಇಲ್ಲಿಗೆ ಕೊಡುವಂಥಾದ್ದೇನಿಲ್ಲ. ಆದರೆ, ಈ ಸಂದರ್ಭದಲ್ಲಿ ತಮಗೆ ತಿಳಿಸುವುದಿಷ್ಟೇ. ಆ ಸಂದರ್ಭದಲ್ಲಿ ಅವರು ವರದಿಯೊಂದನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಆ ರೀತಿ ಕೆಲವರನ್ನು ಅಮಾನತ್ತಿನಲ್ಲಿಡಬೇಕೆಂದು ಹೇಳಿ ಮಾಡಿದಂತಹ ಒಂದು ಶಿಫಾರಸ್ಸಿನಲ್ಲಿ ಅಬ್ಬಾಯಿಯವರ ಹೆಸರು ಕೂಡ ಇದೆ. ಜೊತೆಗೆ, 5–6 ಮಂದಿ ಹೆಸರುಗಳು ಕೂಡ ಇದೆ. ಅದು ಆಗುವ ಪೂರ್ವದಲ್ಲಿ, ಎಂಟು ದಿವಸಗಳ ಹಿಂದೆ ನಾನು ಸದನಕ್ಕೆ ಬರುವಂಥ ಸನ್ನಿವೇಶದಲ್ಲಿ, "I am Justice Barucha speaking here. How is this, you have not suspended concerned officer, DIG and why are you delaying it? By the evening I must have the report." ಎಂದು ಒಂದು ಫೋನ್ ಬಂತು. ನಾನು ಗಾಬರಿಯಾಗಿ ಪ್ರಾಯಶಃ ಇರಬಹುದೇನೋ ಎಂದು "Oh, My lord, I think , I will look into this matter and submit the report." ಎಂದು ಹೇಳಿದೆ. But ಕಾರಿನಿಂದ ಬರುವಾಗ ಸುಪ್ರೀಂ ಕೋರ್ಟ್ ಜಡ್ಜ್ ನೇರವಾಗಿ ನನಗೆ ಹೇಗೆ ಮಾತನಾಡುತ್ತಾರೆ, ಸಾಧ್ಯವೇ ಇಲ್ಲ, ಇಲ್ಲಿ ಏನಾದರೂ ಇರಬಹುದು ಎಂದು ನಮ್ಮ ಕಮೀಷನರ್ ಗೋಪಾಲ್ ಹೊಸೂರ್‌ರವರಿಗೆ ಈ ವಿಷಯವನ್ನು ತಿಳಿಸಿದೆ. ಅವರೆಲ್ಲ ಪರೀಕ್ಷೆ ಮಾಡಿ ನೋಡಿದರೆ ಆ ಕರೆಗಳೆಲ್ಲಾ ಎಲ್ಲಿಂದ ಬಂದಿವೆಯೆಂದರೆ ಪರಪ್ಪನ ಅಗ್ರಹಾರಕ್ಕೇ ಹೋಗುತ್ತಿತ್ತು. ಅದಾದ ಮಾರನೆ ದಿವಸ ಅವರು ಮತ್ತೆ ಕರೆ ಮಾಡಿ, "How is this? You have not taken any action." ಮತ್ತೆ ಫೋನ್ ಕಾಲ್ ಬಂತು. ಆಗ "Shut your bloody mouth. I know who you are. You are an imposter. Shut your bloody mouth" ಎಂದು ನಾನು ಹೇಳಿದೆ. ಅವನು ಆ ಕಡೆ ಕರೆಯನ್ನು disconnect ಮಾಡಿದ. ಅದಾದ ಮೇಲೆ Chief justice of Indiaಗೆ phone ಹೋಯಿತು.

ನಮ್ಮ ಮುಖ್ಯಮಂತ್ರಿಯವರಿಗೆ ಹೋಯಿತು. ಇಲ್ಲಿಯ Chief justiceಗೂ ಹೋಯಿತು, ಇವರನ್ನು ಏಕೆ suspend ಮಾಡಲಿಲ್ಲ ಎಂದು. ಚಾರ್ಲ್ಸ್ ಶೋಭರಾಜ್‌ರವರಿಗಿಂತ ಬುದ್ದಿವಂತರು ಒಬ್ಬರು ಇದ್ದಾರೆ, ಅವರ ಹೆಸರನ್ನು ಇಲ್ಲಿ ಹೇಳುವುದಿಲ್ಲ. ಆ ಕಾರಣಕ್ಕಾಗಿ ಇವೆಲ್ಲಾ ಟವರ್ಸ್ ಪರಪ್ಪನ ಅಗ್ರಹಾರಕ್ಕೆ ಹೋಗುತ್ತಿದ್ದವು. ಇವತ್ತು ಈ ಹಿನ್ನಲೆ ಇದ್ದಾಗ ಬಹುತೇಕ ಸೂಕ್ಷ್ಮಮತಿಯಾಗಿರತಕ್ಕವರು ಅವರು ಈ ಘಟನೆ ಆಗುವುದಕ್ಕಿಂತ 8–10 ದಿವಸಗಳ ಹಿಂದೆ ನನ್ನನ್ನು ವೈಯಕ್ತಿಕವಾಗಿ ಭೇಟಿಯಾಗಿದ್ದರು. ಆ ಸಂದರ್ಭದಲ್ಲಿ ಹೇಳಿದೆ, ನೀವು ಇದರ ಬಗ್ಗೆ ಯಾವುದೇ ಯೋಚನೆ ಮಾಡಬೇಕಾದ್ದು ಇಲ್ಲ. ನಿಷ್ಪಕ್ಷಪಾತವಾದಂಥ ತನಿಖೆಯಾಗುತ್ತದೆ, ವರದಿ ಬಂದಿದ್ದರೂ ಬಂದಿರಬಹುದು, ಆ ವರದಿಯ ಪ್ರಕಾರವೇ ಸರ್ಕಾರ ನಡೆದುಕೊಳ್ಳಬೇಕೆಂದಿಲ್ಲ. ವೈಯಕ್ತಿಕವಾಗಿ ಸಹ ನನಗೆ ಗೊತ್ತಿದೆ. ನಿಮ್ಮಂಥ ದಕ್ಷ ಪ್ರಾಮಾಣಿಕ ಅಧಿಕಾರಿ ನಿಮ್ಮ ಇಡೀ ವಿಚಾರಗಳು ನಮಗೆ ಗೊತ್ತಿರುವ ಕಾರಣ ನೀವು ಯಾವುದೇ ಆತಂಕಕ್ಕೆ ಒಳಗಾಗಬಾರದು ಎಂದು ಅವರಿಗೆ ನಾನು ಸಾಂತ್ವನ ಹಾಗೂ ಧೈರ್ಯವನ್ನು ತುಂಬಿದ್ದೆ. ಇವತ್ತು ಅವರ ಕುಟುಂಬಕ್ಕೆ ಪ್ರಾಯಶಃ ಆ ಮಾಹಿತಿಯ ಅಭಾವ ಇರಬಹುದು, ಆ ಕಾರಣಕ್ಕಾಗಿ ಗೃಹ ಸಚಿವರಿಗೆ ಲಿಖಿತವಾಗಿ ನನ್ನ ಗಂಡ ಕೊಟ್ಟಿದ್ದ, ಅವರು ಏನು ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಅವರು ಯಾವುದೇ ವರದಿಯನ್ನು, ಫಿರ್ಯಾದಿಯನ್ನು ನನ್ನ ಮುಂದೆ ಕೊಟ್ಟಂಥವರಲ್ಲ. ಅಮಾನತ್ತಿನಲ್ಲಿ ಇಡುವುದಾದರೆ ನನಗೆ ಅಪಮಾನವಾಗುತ್ತದೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದರೇ ವಿನಹ ಬೇರೆ ವಿಚಾರವನ್ನು ಪ್ರಸ್ತಾಪ ಮಾಡಿರುವುದಿಲ್ಲ. ಅದರ ಬಗ್ಗೆ ಬಂದಿರುವ ಕಡತವನ್ನೂ ನಾನು ವಿಲೇವಾರಿ ಮಾಡಿಲ್ಲ. ಈ ಹಿನ್ನಲೆಯಲ್ಲಿ ತಪ್ಪಾದ ಅಭಿಪ್ರಾಯಗಳು ಇದ್ದರೆ, ಸೂಕ್ಷ್ಮಮತಿಗಳಾಗಿದ್ದಂಥ ಅಬ್ಬಾಯಿಯವರು ಪ್ರಾಯಶಃ ಯಾವ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರೋ ಗೊತ್ತಿಲ್ಲ. ಅವರನ್ನು ಅಮಾನತ್ತಿನಲ್ಲೂ ಇಟ್ಟಿಲ್ಲ, ಅವರ ಮೇಲೆ ಯಾವ ಕ್ರಮವನ್ನೂ ಕೈಗೊಂಡಿಲ್ಲ, ಕಡತ ಕೂಡ ಈಗಲೂ ಇಲ್ಲೇ ನನ್ನ ಕೈಯಲ್ಲೇ ಇದೆ, ಇದರ ಬಗ್ಗೆ ಸಹ ಕ್ರಮ ಕೈಗೊಂಡಿಲ್ಲ. ಇದರ ಬಗ್ಗೆ ಏನಾದರೂ ತಪ್ಪುಗಳಿದ್ದರೆ ಅದರ ಬಗ್ಗೆ ತನಿಖೆ ಮಾಡುವ ನಿಷ್ಪಕ್ಷಪಾತವಾದ ಕೆಲಸವಾಗುತ್ತದೆ. ಮಾನ್ಯ ಮಾಧುಸ್ವಾಮಿಯವರು ಇಸ್ಕಾನ್‌ರವರಿಗೆ

ನೀವು ಊಟ ಕೊಡತಕ್ಕದ್ದರ ಬಗ್ಗೆ ಇಲ್ಲಿ ಸದನದಲ್ಲಿ ಹೇಳಿದ ಮಾತೇ ಬೇರೆ ಆದರೆ ಮತ್ತೊಂದು ರೀತಿಯ ನಿರ್ಧಾರ ಮಾಡಿದ್ದೀರಿ, ಆದ್ದರಿಂದ ಹಕ್ಕುಚ್ಯುತಿಯಾಗಿದೆ ಎಂದು ನೋಟಿಸನ್ನು ಕೊಟ್ಟಿದ್ದಾರೆ. ಆಗ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಈಗ ಈ ವಿಚಾರದಲ್ಲಿ ಸರಿಯಾದ ಉತ್ತರವನ್ನು ತಯಾರು ಮಾಡಿಕೊಂಡು ಬನ್ನಿ ಎಂದು ಕಳುಹಿಸಿದಾಗ ಅವರು ಇವರ ಜೊತೆ ಇಡೀ ದಿವಸವೆಲ್ಲಾ ಇದ್ದಾರೆ, ಅದಕ್ಕೆ ಜೈಲಿನ ಮ್ಯಾನ್ಯುಯಲ್‌ನಲ್ಲಿರುವ ವಿಷಯಗಳೇನು, ಅವರ ಮತ್ತು ಇಸ್ಕಾನ್‌ರವರ ಜೊತೆ ಆದ ಒಪ್ಪಂದ, ಈ ವಿಚಾರದಲ್ಲಿ ಅಬ್ಬಾಯಿಯವರೇ ಮಾಹಿತಿಯನ್ನು ಕೊಟ್ಟು ಅದರ ಬಗ್ಗೆ ವರದಿಯನ್ನು ಕೊಡುವುದರಲ್ಲಿ ಸಂಪೂರ್ಣವಾಗಿ ಸಹಕರಿಸಿದ್ದಾರೆ. ಈ ಆಹಾರ ಪದಾರ್ಥಗಳು ಸಿಕ್ಕಿದ್ದು ಉಗ್ರಾಣದಲ್ಲಿ ಅಲ್ಲ, ನಾನು ತಪ್ಪಾಗಿ ಹೇಳಿದ್ದೆ. ಅದು ಸಿಕ್ಕಿದ್ದು ಕ್ಯಾಂಟೀನ್‌ನಲ್ಲಿ. ಖೈದಿಗಳಿಗೆ ಕ್ಯಾಂಟೀನ್ ಇರುತ್ತದೆ. ಈ ಎಲ್ಲಾ ವಿಚಾರಗಳ ಬಗ್ಗೆ ಅವರು ಸಂಪೂರ್ಣವಾಗಿ ಸಹಕಾರವನ್ನು ಕೊಟ್ಟಿದ್ದಾರೆ. ಅನೇಕರಿಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕರ್ತವ್ಯದಲ್ಲಿ ಯಾವುದೇ ರೀತಿಯ ತೊಂದರೆ ಇಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಆದರೆ ಆ ಮನುಷ್ಯನ ಮೇಲೆ ಯಾವ ಮಾನಸಿಕ ಒತ್ತಡಗಳು ಇತ್ತೋ ಗೊತ್ತಿಲ್ಲ. ಇದೊಂದು ನಿಜವಾಗಿಯೂ ದುರ್ದೈವದ ಸಂಗತಿ. ಒಬ್ಬ ಉತ್ತಮ ಹಾಗೂ ದಕ್ಷ ಅಧಿಕಾರಿಯನ್ನು ನಾವು ಕಳೆದುಕೊಂಡಿದ್ದೇವೆ. ಇವರು ಆತ್ಮಹತ್ಯೆ ಮಾಡಿಕೊಂಡಿರುವುದಕ್ಕೆ ನಮ್ಮ ಶ್ರದ್ಧಾಂಜಲಿ ಇದೆ. ನಾನು ಆ ಸಂದರ್ಭದಲ್ಲಿ ಬಳ್ಳಾರಿಯಲ್ಲಿದ್ದೆ. ಆದ್ದರಿಂದ ನಾನು ಹೇಳಿದೆ, ಬೆಳಿಗ್ಗೆ ಬಂದ ತಕ್ಷಣವೇ ನಾನು ನೇರವಾಗಿ ಅವರ ಮನೆಗೆ ಹೋಗುತ್ತೇನೆ, ಸರ್ಕಾರದ ಪರವಾಗಿ ಪುಷ್ಪಗುಚ್ಚವನ್ನು ಅರ್ಪಿಸಿ ಗೌರವವನ್ನು ಸಮರ್ಪಿಸುತ್ತೇವೆ ಎಂಬ ಮಾತನ್ನು ಹೇಳಿದೆ. ಆದರೆ ಅವರ ತಂದೆಯವರು, ಇಲ್ಲಾ ನಮ್ಮ ಬೈಲಹೊಂಗಲದಲ್ಲೇ ಅಂತ್ಯಕ್ರಿಯೆ ಆಗಬೇಕು. ಆದ್ದರಿಂದ ಅದನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದರಿಂದ ಅವರ ಕುಟುಂಬದ ಆಸೆಗೆ ಅನುಗುಣವಾಗಿ ರಾತ್ರೋ ರಾತ್ರಿ ಅದಕ್ಕೆ ಎಲ್ಲ ವ್ಯವಸ್ಥೆಯನ್ನು ನಮ್ಮ ಸರ್ಕಾರ ಏರ್ಪಾಟು ಮಾಡಿ, ಅಧಿಕಾರಿಗಳು ಏರ್ಪಾಟು ಮಾಡಿ ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಸರ್ಕಾರದ ಗೌರವದ ರೀತಿಯಲ್ಲಿ ಅಂತ್ಯ ಸಂಸ್ಕಾರವೂ ನೆರವೇರಿದೆ. ಅವರಿಗೆ ಏನೆಲ್ಲಾ ಕ್ರಮ ಕೈಗೊಳ್ಳಬೇಕೋ ಅದರ ಬಗ್ಗೆ ಕ್ರಮ

ತೆಗೆದುಕೊಳ್ಳುತ್ತೇವೆ. ಅವರ ಕುಟುಂಬದ ಸದಸ್ಯರು ವಾಪಸ್ ಬಂದಾಗ ನಾವು ಹೋಗಿ ಸಾಂತ್ವನ ಹೇಳಬಹುದು. ನಾವು ಏನು ಸಾಂತ್ವನ ಹೇಳಿದರೂ ಒಬ್ಬ ವ್ಯಕ್ತಿಯ ಈ ರೀತಿಯ ಸಾವು ಏನಿದೆ, ಅದಕ್ಕೆ ಮತ್ತೆ ಶ್ರದ್ಧಾಂಜಲಿ ಕೊಡಬಹುದೇ ವಿನಃ ಅವರ ಮೇಲೆ ಆಗಿರುವಂಥ ಒತ್ತಡ ಅಥವಾ ಅವರ ಕುಟುಂಬಕ್ಕೆ ಆಗಿರುವ ನಷ್ಟವನ್ನು ನಾವು ಸರಿದೂಗಿಸಲು ಸಾಧ್ಯವಿಲ್ಲ. ಅದೂ ಕೂಡ ಅವರಿಗೆ ವೈಯಕ್ತಿಕವಾಗಿ ಗೊತ್ತಿದೆ. ಅವರು ತಮ್ಮ ಪತ್ರದಲ್ಲಿ ನಾನು ಮಾಡಲಾರದ ತಪ್ಪಿಗಾಗಿ ನನಗೆ ತೊಂದರೆಯಾಗಿರುವ ಕಾರಣಕ್ಕಾಗಿಯೇ ನಾನು ಇಂಥ ನಿರ್ಧಾರಕ್ಕೆ ಬರಬೇಕಾಗಿದೆ ಎಂಬ ರೀತಿಯಲ್ಲಿ ಇದು ನನ್ನ ಸಾವಿಗೆ ನಾನೇ ಕಾರಣ, ನನ್ನ ಕುಟುಂಬ ಮತ್ತು ನನ್ನ ಮಗನಿಗೆ ಅನ್ಯಾಯ ಮಾಡುತ್ತಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ. ನಿನ್ನೆ ಕೂಡ ಈ ವಿಚಾರದಲ್ಲಿ ನಮ್ಮ ಹೆಚ್ಚುವರಿ ಪೊಲೀಸ್ ಅಧಿಕಾರಿಯನ್ನು ಮತ್ತು ಇತರ ನಮ್ಮ ಪೊಲೀಸ್ ಅಧಿಕಾರಿಯವರನ್ನು ಕರೆಸಿ ರಾತ್ರಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಸಹ ಅವರು ಈ ವಿಷಯವನ್ನು ತಿಳಿಸಿದರು. ಅವರು ಬಹಳ ಸೂಕ್ಷ್ಮಮತಿಯಾಗಿದ್ದರು, ಸುಮಾರು 10–11 ವರ್ಷಗಳ ಹಿಂದೆ ಯಾವುದೋ ಒಂದು ಕಾರಣಕ್ಕಾಗಿ ಕೇವಲ ಒಂದು ಮೆಮೋ ಕೊಟ್ಟಿದ್ದರಿಂದ ಆ ಉನ್ನತಾಧಿಕಾರಿಗೆ ಆ ಕೂಡಲೇ ಅವರು ರಾಜೀನಾಮೆ ಪತ್ರವನ್ನು ಕೊಟ್ಟಿದ್ದರಂತೆ. ಆಗ ಉನ್ನತಾಧಿಕಾರಿಯವರು ಇಲ್ಲಾ ರಾಜೀನಾಮೆ ಕೊಡತಕ್ಕದ್ದಲ್ಲ, ಇಂಥದ್ದು ಬಂದಾಗ ನಾವು ಮೆಮೋ ಕೊಟ್ಟಿದ್ದೇವೆ, ಉತ್ತರ ಕೊಡಿ, ನಿಮ್ಮಂಥ ಅಧಿಕಾರಿಗಳು ಇಲ್ಲಿ ಇರಬೇಕು ಎಂಬ ಮಾತನ್ನು ಹೇಳಿದರಂತೆ. ಅಂದರೆ ಪ್ರಾಯಶಃ ಒಬ್ಬ ಧೈರ್ಯವಂತ ಪ್ರಾಮಾಣಿಕ ಅಧಿಕಾರಿಯಾಗಿರುವುದರಿಂದ ಅಂಥ ನಿರ್ಧಾರಗಳನ್ನು ತೆಗೆದುಕೊಳ್ಳತಕ್ಕವರೂ ಆಗಿರಬಹುದು. ಇತ್ತೀಚಿನ ದಿನಮಾನಗಳಲ್ಲಿ ಸರ್ಕಾರಿ ನೌಕರರಾಗಲಿ ಅಥವಾ ನಮ್ಮಂಥ ರಾಜಕಾರಣಿಗಳಾಗಲಿ ಇಷ್ಟೂ ಸೂಕ್ಷ್ಮಮತಿಗಳಾದರೆ ಬಹಳ ಕಷ್ಟದ ಪರಿಸ್ಥಿತಿಯಾಗುತ್ತದೆ. ಆದ್ದರಿಂದ ಆತ್ಮಹತ್ಯೆ ಮಾಡಿಕೊಂಡಿರುವ ಅಬ್ಬಾಯಿಯವರ ಬಗ್ಗೆ ತಾವೇನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ನಮ್ಮ ಸಹಮತಿ ಇದೆ. ಅತ್ಯಂತ ಗೌರವಾನ್ವಿತ ದಕ್ಷ ಅಧಿಕಾರಿಯಾಗಿದ್ದರು ಅವರು. ಅವರ ಬಗ್ಗೆ ನಮ್ಮ ಸಂತಾಪ ಇದೆ. ಸರ್ಕಾರದಿಂದ ನಾವು ಅವರಿಗೆ ಏನೆಲ್ಲಾ ಸವಲತ್ತುಗಳನ್ನು ಕೊಡಬೇಕೋ ಕಾನೂನಿಗೆ ಅನುಗುಣವಾಗಿ ಅದನ್ನು ಮಾಡುತ್ತೇವೆ.

ಶ್ರೀ ಧರ್ಮಸಿಂಗ್: ಆದರೆ ಅದರ ಬಗ್ಗೆ ಸಮಗ್ರ ತನಿಖೆ ಆಗಬೇಕು. ಒಂದು ತನಿಖೆ ಮಾಡಿ ಏಕೆ ಆಯಿತು, ಏನು ಎಂಬ ಬಗ್ಗೆ ಗೊತ್ತಾಗುತ್ತದೆ. ಅವರು letter ಬರೆದರೂ ಸಹ ಶವ ಪರೀಕ್ಷೆ ಮಾಡುವ ರೀತಿಯಲ್ಲಿ ಅಲ್ಲಗೆಳೆದರು. So many things are there. ಅಲ್ಲಿ ಯಾರ್ಯಾರು ಇದ್ದಾರೆ ದೂರವಾಣಿ ಕರೆ ಬರುವುದರ ಬಗ್ಗೆ ಸಹ ತಾವು ಪ್ರಸ್ತಾಪ ಮಾಡಿದ್ದೀರಿ. ಪೊಲೀಸ್ ಇಲಾಖೆಯಲ್ಲಿ ಈ ರೀತಿಯ ಘಟನೆ ನಡೆದಿದೆ. ನಾನು ಸಹ ಮುಖ್ಯಮಂತ್ರಿಯಾದಾಗ ಎಸ್.ಪಿ. ಹಂತದಲ್ಲಿ ಕೆಲಸ ಮಾಡತಕ್ಕವರು ಮಾಂಟೆಕ್ ಸಿಂಗ್ ಅಹ್ಲುವಾಲಿಯ, "I am, Deputy chairman of planning commission speaking" ಎಂದು ಇದೇ ರೀತಿಯಲ್ಲಿ ಮಾತನಾಡಿದ್ದರು. ನಾನು ನಿಮಗೆ ಹೇಳಿರಬೇಕು. ಆ ರೀತಿ ಹೇಳಿದ ಮೇಲೆ ನಾನು ರಂಗನಾಥ್‌ರವರನ್ನು ಕರೆಸಿ Deputy chairman of planning commission ರವರು ಹೇಳಿದ್ದಾರೆ, ಎಲ್ಲಾದರೂ ಒಂದು ಡಿ.ಸಿ.ಪಿ. ಕೊಡಲೇ ಬೇಕು ಎಂದು ಹೇಳಿದೆ. Sir, now it is not possible ಎಂದು ಅವರು ಹೇಳಿದಾಗ ಸುಮ್ಮನೆ ನಮ್ಮ ತಲೆ ಬಿಸಿ ಏಕೆ ಮಾಂಟೇಕ್ ಸಿಂಗ್ ಅಹ್ಲುವಾಲಿಯ phone ಮಾಡಿ ಹೇಳುತ್ತಿದ್ದಾರೆ ಕೊಟ್ಟು ಬಿಡು ಎಂದು ಹೇಳಿದೆ. ಅವರು ಮತ್ತೆ ಫೋನ್ ಮಾಡಿದಾಗ ನಾನು ಮಾಂಟೇಕ್ ಸಿಂಗ್ ಅಹ್ಲುವಾಲಿಯ ಎಲ್ಲಿ ಇದ್ದಾರೆ ಎಂದು ಕೇಳಿದಾಗ ಅವರು ಸುಮ್ಮನಾದರು. Then I contacted Montek Singh Ahluwalia. ಅವರು "I have not contacted. I don't know that fellow." ಎಂದು ಹೇಳಿದರು. ಹೀಗೆಲ್ಲಾ ಮಾಡತಕ್ಕ ಅಧಿಕಾರಿಗಳು ಇದ್ದಾರೆ. ಅವರಿಗೆ ಯಾವ ಅಧಿಕಾರಿಯೆಂದು ಗೊತ್ತು. ಇಂಥವರು ಸಹ ಪೊಲೀಸ್ ಇಲಾಖೆಯಲ್ಲಿ ಇದ್ದಾರೆ. ನಿಮಗೆ ಹೇಗೆ ಭರೂಚ ಎಂದು ದೂರವಾಣಿ ಮಾಡಿದ್ದರು ಎಂದು ಹೇಳಿದಿರಲ್ಲ ಆ ರೀತಿ ಇದ್ದಾರೆ, ಇರಲಿ. ಆದರೆ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿ ಪಾಪ ಅವರ ಮನೆಯವರು, ಮಗ ಇದ್ದಾರೆ ಮತ್ತು ಆ ಭಾಗದ ಜನರು ಇದ್ದಾರೆ, ತಂದೆ ಇದ್ದಾರೆ. ಇದರ ಬಗ್ಗೆ ತನಖೆ ಮಾಡಿದರೆ ಸರಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ತಾವೆಲ್ಲರೂ ಏನೇನಾಗಿದೆ ಎಂಬ ವಿಚಾರವನ್ನೆಲ್ಲ ಸದನಕ್ಕೆ ಹೇಳಿದ್ದೀರಿ. ಎಲ್ಲಕ್ಕಿಂತ ಹೆಚ್ಚಾಗಿ ಬಹಳ ದಕ್ಷ ಅಧಿಕಾರಿ ಅವರು ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಿ. ಒಬ್ಬರು ಅಧಿಕಾರಿ

ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬರಬೇಕಾದರೆ ಅದರ ಹಿಂದೆ ಬಹಳ ಏನೋ ಅಗಾಧವಾದಂಥ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಸರ್ಕಾರ ತಕ್ಷಣ ತನಿಖೆ ಆರಂಭ ಮಾಡಬೇಕು. ಈಗ ಅನೇಕ ಸುದ್ದಿಗಳು ಬಂದಿದೆ. ಯಾರದೋ ಕಿರುಕುಳ, ಹಿರಿಯ ಅಧಿಕಾರಿಗಳ ಒತ್ತಡದಿಂದ ಅವರು ಆತ್ಮಹತ್ಯೆ ಮಾಡಿಕೊಂಡರು ಎಂದು ಸುದ್ದಿ ಬಂದಿದೆ. ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಒಬ್ಬ ದಕ್ಷ ಅಧಿಕಾರಿ ಬರಬೇಕಾದರೆ, ಅದರ ಹಿನ್ನಲೆ ಏನು ಎಂಬ ಬಗ್ಗೆ ನಾವು ಪರಿಣಾಮಕಾರಿಯಾಗಿ ತನಿಖೆ ನಡೆಸಬೇಕು. ಅದರ ಬಗ್ಗೆ ತಾವು ದಯವಿಟ್ಟು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪೂರ್ವದಲ್ಲಿ ಬರೆದಿರುವ ಒಂದು ನೋಟ್ ಇದೆ. ಅದರಲ್ಲಿ ಅವರು "ನಾನು ಉದ್ದೇಶ ಪೂರ್ವಕವಾಗಿ ಯಾವುದೇ ತಪ್ಪನ್ನು ಮಾಡಿರುವುದಿಲ್ಲ. ನನ್ನದಲ್ಲದ ತಪ್ಪಿಗೆ ಸಾಕಷ್ಟು ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದೇನೆ. ಗೊತ್ತಿದ್ದೂ ಯಾವುದೇ ಖೈದಿಗೂ ತಪ್ಪು ಮಾಡಲು ಬಿಟ್ಟಿರುವುದಿಲ್ಲ. ನಾನು ನನ್ನ ಹೆಂಡತಿ ಮತ್ತು ಮಗನಿಗೆ ಅನ್ಯಾಯ ಮಾಡಿ ಹೋಗುತ್ತಿದ್ದೇನೆ. ನನ್ನ ಸಾವಿಗೆ ಯಾರೂ ಕಾರಣರಲ್ಲ" ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಸಾಯುವುದಕ್ಕೂ ಮುಂಚೆ ಸಾಮಾನ್ಯವಾಗಿ ಅದೇ ರೀತಿ ಬರೆಯುತ್ತಾರೆ. ನಾನು ಸತ್ತಿರುವ ಅನೇಕರನ್ನು ನೋಡುತ್ತಿದ್ದೇನೆ. ತಮ್ಮಲ್ಲಿ ನಾನು ಏನು ಮನವಿ ಮಾಡುತ್ತಿದ್ದೇನೆಂದರೆ, ತಾವು ಅವರನ್ನು ಒಳ್ಳೆಯ ಅಧಿಕಾರಿಯೆಂದು ಹೇಳಿದಿರಿ. ಅವರ ಕೆಲಸದ ಬಗ್ಗೆ ಗೊತ್ತಿರುವುದನ್ನು ಹೇಳಿದಿರಿ. ಅವರ ಕಡತ ತಂದಿದ್ದೇನೆ ಎಂದೂ ಹೇಳಿದ್ದೀರಿ. ಆದರೆ ಸಾಯತಕ್ಕ ಪರಿಸ್ಥಿತಿ ನಿರ್ಮಾಣ ಆಗಬೇಕಾದರೆ, ಅದರಲ್ಲೂ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣ ಆಗಬೇಕಾದರೆ ಅದರಲ್ಲಿ ಏನಿದೆ ಎಂಬ ಬಗ್ಗೆ ತನಿಖೆಯಾಗಬೇಕು.

ಶ್ರಿ ಎಂ.ಪಿ.ಪ್ರಕಾಶ್:– ನನಗೆ ನೆನಪಿದೆ, ಆ ಹೆಸರನ್ನು ನಾನು ಉದ್ದೇಶ ಪೂರ್ವಕವಾಗಿ ಹೇಳುವುದಿಲ್ಲ. ಒಬ್ಬ ಖೈದಿ ಇಂತಹದ್ದನ್ನೆಲ್ಲಾ ಮಾಡುತ್ತಿರುತ್ತಾನೆ. ಅಲ್ಲಿ ಬಹಳ ಬುದ್ಧಿವಂತರಿದ್ದಾರೆ. ಅದು ಏನಾದರೂ ಇದ್ದುಕೊಳ್ಳಲಿ, ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು

ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಇದರಲ್ಲಿ ನಿಷ್ಪಕ್ಷಪಾತವಾದಂತಹ ತನಿಖೆಯನ್ನು ಇಲಾಖೆಯ ಉನ್ನತಾಧಿಕಾರಿಗಳಿಂದ ಖಂಡಿತವಾಗಿಯೂ ನಾನು ಮಾಡಿಸುತ್ತೇನೆ. ಸತ್ಯ ಸಂಗತಿ ಏನಿದೆ, ಅದು ಹೊರಗೆ ಬರಲಿ. ಯಾವುದೇ ಮಾನಸಿಕ ತೊಂದರೆ ಎಂದರೆ, ಅದರಲ್ಲಿ ಎರಡು ವಿಧ ಇರುತ್ತದೆ. ಒಂದು, ಬಹಳ ಸೂಕ್ಷ್ಮಮತಿಗಳಾಗಿರುತ್ತಾರೆ, ಅವರು over react ಮಾಡುತ್ತಾರೆ. ಕೆಲವರು ಏನು ಕೊಟ್ಟರೂ ಕೂಡ, ಇಂತಹ ನಮ್ಮಂತಹ ದಪ್ಪ ಚರ್ಮ ಇರತಕ್ಕಂಥ ಜನ, ಹೊರಗಡೆ ನಮಗೆ ಏನು ಛೀ! ಥೂ! ಅಂದರೂ ಕೂಡ, ಅದೇನೂ ಇಲ್ಲವೆಂದು ಕೊಡವಿಕೊಂಡು ಹೋಗುವಂತಹ ನಮ್ಮಂತಹವರೂ ಇರುತ್ತಾರೆ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ನಿಷ್ಪಕ್ಷಪಾತವಾದಂತಹ ತನಿಖೆಯನ್ನು ನಾವು ಮಾಡಿಸುತ್ತೇವೆ.

(4) ಜಲ ನಿರ್ಮಲ ಯೋಜನೆ ಅವಧಿ ವಿಸ್ತರಿಸುವ ಕುರಿತು.

ಶ್ರೀ ಡಿ.ಆರ್.ಪಾಟೀಲ್ [ಗದಗ]:– ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಜಲ ನಿರ್ಮಲ ಯೋಜನೆ ಈಗ ಅನುಷ್ಠಾನಗೊಳ್ಳುತ್ತಿದೆ. ಡಿಸೆಂಬರ್ 31ಕ್ಕೆ ಅವರ ಅವಧಿ ಮುಕ್ತಾಯಗೊಳ್ಳುತ್ತಿದೆ. ಬಹಳಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಇನ್ನೂ ನಡೆಯುತ್ತಿದೆ. ಅದರ ಅನುಷ್ಠಾನ ಈ ಡಿಸೆಂಬರ್ 31ರೊಳಗೆ ಪೂರ್ತಿಯಾಗುವುದಿಲ್ಲ. ಅದಕ್ಕೆ ತಾವು World Bankಗೆ time extensionಗೆ ಕೂಡಲೇ ಮನವಿ ಮಾಡಬೇಕಾಗುತ್ತದೆ. ಇನ್ನೂ ಸುಮಾರು 150 ಕೋಟಿ ರೂ.ಗಳಷ್ಟು ನಡೆದ ಕಾಮಗಾರಿಗಳಿಗೆ ಹೆಚ್ಚಿನ ಹಣ ಬೇಕಾಗುತ್ತದೆಂದು ತಿಳಿದು ಬಂದಿದೆ. ಈ ಬಗ್ಗೆ World Bank ಅಧಿಕಾರಿಗಳ ಜೊತೆಗೆ ನಾನು ಚರ್ಚೆ ಮಾಡಿದೆ. ಈಗ ಕೇಂದ್ರ ಸರ್ಕಾರದ ಹೊಸ ನೀತಿಯಿಂದಾಗಿ, World Bank ನೇರವಾಗಿ ಹಣಕಾಸಿನ ಸಹಾಯವನ್ನು ರಾಜ್ಯ ಸರ್ಕಾರಗಳಿಗೆ ಮಾಡಲಿಕ್ಕೆ ಮುಂದೆ ಬರುತ್ತಿದೆ. ಅದೂ 0% interest ನಲ್ಲಿ, 10 ವರ್ಷ moratorium, 25 years re-payment period ಇರುತ್ತದೆ. ಅದಕ್ಕೆ ಬಹಳ ಅನುಕೂಲವಾಗುತ್ತದೆ. ದಯವಿಟ್ಟು ಈ facility ಯನ್ನು ಉಪಯೋಗ ಮಾಡಿಕೊಂಡು, ಅದಕ್ಕೆ ಬೇಕಾಗುವಂತಹ ಹೆಚ್ಚಿನ ಹಣವನ್ನು ತಾವು ಹೊಂದಾಣಿಕೆ ಮಾಡಬೇಕು. Time extension ಕೇಳಬೇಕು. ಇದರ ಜೊತೆಗೆ ಈಗ 700 ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಈ ಜಲ ನಿರ್ಮಲ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ನಮ್ಮ ಭಾಗದಲ್ಲಿ ಇನ್ನೂ 2–3% ಗ್ರಾಮ